


### ಪುಸ್ತಕದ ಪ್ರಯೋಜನ ಪಡೆಯಿರಿ

ಸ್ತನ ಕ್ಯಾನ್ಸರ್ ಬಗ್ಗೆ ಸುಶೀಲಾ ಡೋಣೂರರ 'ಸಾವನ್ನು ಗೆದ್ದವರು' ಲೇಖನ ಮಹಿಳೆಯರ ಆತಂಕ ದೂರ ಮಾಡುವಂತಿದೆ. ಹೆಚ್ಚಿನ ವೈದ್ಯಕೀಯ ವಿವರಗಳಿಗೆ ನವಕರ್ನಾಟಕ ಪ್ರಕಾಶನ ಪ್ರಕಟಿಸಿರುವ 'ಸ್ತ್ರೀ ಮಾರಕ ವ್ಯಾಧಿ ಸ್ತನ ಕ್ಯಾನ್ಸರ್– ಕಾರಣ– ತಪಾಸಣೆ– ಪರಿಹಾರ' (ಪ್ರೊ. ಎ. ರಮೇಶ್‌ರಾವ್) ಓದಬಹುದು. ಇದೇ ಪ್ರಕಾಶನದ 'ಬದುಕು ಬದಲಿಸಬಹುದು' (ನೇಮಿಚಂದ್ರ) ಕೃತಿಯು ಕ್ಯಾನ್ಸರ್ ಗೆದ್ದ ವೈದ್ಯೆ ಡಾ. ಅನುಪಮಾ ನಿರಂಜನ ಹಾಗೂ ಕ್ಯಾನ್ಸರ್ ವಿರುದ್ಧ ಹೋರಾಡಿದ ಹತ್ತಾರು ಮಹನೀಯರು ಮತ್ತು ಮಹಿಳೆಯರ ಬಗ್ಗೆ ವಿವರಗಳನ್ನು ಒಳಗೊಂಡಿದೆ.

–ಚೇದ್ರೆ ಮಂಜುನಾಥ, ಚಿತ್ರದುರ್ಗ

### ಕಠೋರ ಪದಬಳಕೆ ಬೇಡ

ಸ್ತನ ಕ್ಯಾನ್ಸರ್‌ಗೆ ಮಾರಿ, ಶಾಪ, ಮಹಾಮಾರಿ, ಸಾವಿನ ಬಾಗಿಲು, ಎಂಬ ಪದಗಳನ್ನು ಬಳಸಿರುವುದರಿಂದ ಜನರಲ್ಲಿ ಕಾಯಿಲೆಯ ಬಗ್ಗೆ ಭೀತಿ, ಕಳಂಕ, ಕಾಯಿಲೆ ಮುಚ್ಚಿಡುವಿಕೆ ಹೆಚ್ಚಾಗುತ್ತದೆಯೇ ಹೊರತು ಸಕಾರಾತ್ಮಕ ಜ್ಞಾನ ಬೆಳೆಯುವುದಿಲ್ಲ.

–ಡಾ. ಡಿ.ಕೆ. ಮಹಾಬಲರಾಜು

### ಅನ್ನದಿಂದ ನೆಮ್ಮದಿ

'ಅನ್ನ ತಿನ್ನಿ' ಡಾ. ಎಚ್.ಎಸ್. ಪ್ರೇಮ ಅವರ ಲೇಖನವನ್ನು ಓದಿ ಅನ್ನ ತಿನ್ನುವ ನಮಗೆಲ್ಲಾ ನೆಮ್ಮದಿ ಯಾಯಿತು. ಏನೆಲ್ಲಾ ಭಕ್ಷ್ಯ ತಿಂದರೂ ಒಂದು ಹಿಡಿ ಅನ್ನ ತಿಂದಾಗ ಆಗುವ ಸಂತೃಪ್ತಿ ಯಾವುದರಿಂದಲೂ ತುಂಬಲು ಸಾಧ್ಯವಿಲ್ಲ.

–ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು
ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಗೀತಾ ಬರ್ಲ, ಅಮ್ಟೆ
ರಮಜಾನ ಕೆ.ಕೊರ್ತಿ, ಬಾದಾಮಿ/ ಕೆ.ಎ.ಸೌಮ್ಯ, ಮೈಸೂರು
ಎಂ.ಜೆ.ಆರ್.ಶೇಖರ್, ದೊಡ್ಡಬಳ್ಳಾಪುರ/ ನರೇಂದ್ರ, ಸಿರಕಜೆ,
ಎಂ.ಎಸ್.ನಾಗರಾಜ, ಮೈಸೂರು

### ಯಾರ ಮಾತು ನಂಬುವುದು?

'ಅನ್ನ ತಿನ್ನಿ' ಲೇಖನ ಓದಿ ಅನ್ನ ಪ್ರಿಯ ಳಾದ ನನಗೆ ಸಂತೋಷ ವೇನೋ ಆಯ್ತು. ಆದರೆ ಇದೊಂದು ಜನ ಸಾಮಾನ್ಯರನ್ನು ಗೊಂದಲಕ್ಕೀಡು ಮಾಡುವ ಸಲಹೆ. ಡಯಾಬಿಟಿಸ್, ಕೊಲೆಸ್ಟ್ರಾಲ್ ಇದ್ದವರು ಯಾವುದೇ ಪದ್ಧತಿಯ ವೈದ್ಯರನ್ನು ಕೇಳಿದರೂ– 'ಅಕ್ಕಿ ತಿನ್ನಬೇಡಿ. ಗೋಧಿ, ರಾಗಿ ಉಪಯೋಗಿಸಿ' ಎಂಬ ಸಲಹೆ ನೀಡು ತ್ತಾರೆ. ಇಂತಹ ಸಲಹೆ ಧಿಕ್ಕರಿಸಿ ಅಕ್ಕಿ ಯನ್ನೇ ಉಪಯೋಗಿಸಿ ದುಷ್ಪರಿ ಣಾಮಕ್ಕೆ ಗುರಿಯಾಗಿರುವ ನೂರಾರು ದೃಷ್ಟಾಂತಗಳಿವೆ– ಸ್ವಾನುಭವವೂ ಹೌದು. ನಾವು ವೈದ್ಯರ ಮಾತನ್ನು ನಂಬಬೇಕಾ? ಇಲ್ಲ ಡಯಟೀಶಿಯನ್ ಮಾತನ್ನಾ?

–ರೇಷ್ಮಾ ಎ.ಎಸ್.ಬಾಳೆಹೊನ್ನೂರು

### ಭಾರತೀಯ ದೃಷ್ಟಿ

'ಜಾನ್ ನ್ಯಾಶ್...' (ಡಾ. ಕೆ.ಎಸ್. ಪವಿತ್ರ). 'ಅಸ್ವಸ್ಥ ಮನಸ್ಸು ಹೆಚ್ಚು ಸೃಜನಶೀಲ' ಹೌದೆ? ಪಾಶ್ಚಾತ್ಯರ ವಿಷಯದಲ್ಲಿ ಅದು ನಿಜವಿರಬಹುದು. ಆದರೆ ಭಾರತೀಯ ದೃಷ್ಟಿ ಬೇರೆ: ರಾಜಶೇಖರನೆಂಬ ಅಲಂಕಾರಿಕ ಕವಿತ್ವದ ಎಂಟು ಮಂದಿ ತಾಯಂದಿರ ಪಟ್ಟಿಯಲ್ಲಿ 'ದೇಹ ಮನಸ್ಸುಗಳ ಸ್ವಸ್ಥತೆ'ಗೆ ಪ್ರಥಮ ಸ್ಥಾನ ಕೊಡುತ್ತಾನೆ! (ಪ್ರತಿಭೆಗೆ ದ್ವಿತೀಯ ಸ್ಥಾನ).

–ಸಿಪಿಕೆ, ಮೈಸೂರು

### ನೀರಾಹಾರವಲ್ಲ, ನಿರಾಹಾರ

'ಆರೋಗ್ಯಕ್ಕೆ ಉಪವಾಸ' ಲೇಖನದಲ್ಲಿ ಎರಡು ಮೂರು ಕಡೆ 'ನೀರಾಹಾರ' ಎಂದೇ ಉಲ್ಲೇಖವಾಗಿದೆ. ವಾಸ್ತವವಾಗಿ ಕನ್ನಡದಲ್ಲಿ ಇಂತಹ ಪದವೇ ಇಲ್ಲ. ಇದು ನಿರಾಹಾರ (ನಿಟ್ಟುಪವಾಸ ಎಂದರ್ಥದಲ್ಲಿ) ಎಂದಿರಬೇಕಿತ್ತು.

'ವಿಕಲಚೇತನನ ಸಾಧನೆ'ಯಲ್ಲಿಯ ವಿಕಲಚೇತನ ಎನ್ನುವ ಪದ ಬಳಕೆಯನ್ನು ಒಪ್ಪುವುದು ಸಾಧ್ಯವಿಲ್ಲ. ಚೇತನವಿಲ್ಲದಿರುವುದು ವಿಕಲಚೇತನ ಎಂದಾಗುತ್ತದೆ.

–ಕೆ.ವಿ. ಮಂಜುನಾಥ್, ಕುಂಟುಗೋಡು

